ತನ್ನಂತೆಯೇ ಬಿರು ಬಿರನೆ ಬೀಡಿ ಎಳೆಯುತ್ತಲೋ ಕೆಮ್ಮುತ್ತಲೊ ಹೆಜ್ಜೆ ಹಾಕುತ್ತಿದ್ದವರನ್ನು ಸೇರಿಕೊಂಡು ಎ.ಪಿ.ಎಮ್.ಸಿ ಅಂಗಳ ತಲುಪಿದ್ದ. ಅಲ್ಲಿ ನಿನ್ನೆ ನಡೆದ ಸಂತೆಯ ಕಸ ಬೆಟ್ಟದಷ್ಟು ಬಿದ್ದಿತ್ತು. ನಾಳೆ ನಡೆಯಲಿರುವ ಸಮಾವೇಶಕ್ಕೆ ಚೊಕ್ಕ ಮಾಡಿಕೊಡುವ ಜವಾಬ್ದಾರಿಯನ್ನ ಮೇಸ್ತ್ರಿ, ಗಡ್ಡನೂ ಸೇರಿ ಇನ್ನ ಐದು ಜನ ಪೌರಕಾರ್ಮಿಕರಿಗೆ ಹಂಚಿದ್ದ.

ಗಡ್ಡನಂತೆ ಇನ್ನ ಮೂವರು ಪರಪರನೆ ಕಸಬೊರಕೆಯಿಂದ ಕಸವನ್ನು ಎಳೆದು ಗುಡ್ಡಾಕುತ್ತಿದ್ದರೆ, ಉಳಿದ ಅದರಲ್ಲೂ ಹೆಂಗಸರು ಬಾಣಲಿ, ಮಂಕ್ರಿಗಳಲ್ಲಿ ಕಸವನ್ನು ಎತ್ತಿ ಟ್ರಾಕ್ಟರ್‌ಗೆ ಹಾಕುತ್ತಿದ್ದರು. ಒಬ್ಬರ ಮುಖ ಒಬ್ಬರಿಗೆ ಕಾಣದಂತ ಮೊಬ್ಬುಗತ್ತಲಾದರೂ ಆ ಮೂಲೆ ಈ ಮೂಲೆ ಯಾವ ಮೂಲೆಯಲ್ಲಿದ್ದರೂ ಕಸ ಮಾತ್ರ ಇವರ ಪೊರಕೆಯ ಕಣ್ಣಿಗೆ ಬೀಳದೆ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಸ್ವಾಟೆಗೆ ಹೊಗೆಸೊಪ್ಪ ವತ್ತಿಸಿಕೆಂಡೇ ಇದ್ದ ಹೆಂಗಸೊಬ್ಬಳು 'ಗಡ್ಡಪ್ಪ ನಿನ್ನ ಮಗನಿಗೆ ಕೊಡಿಸ್ದ ಬಟ್ಟೆಯ?' ಎಂದು ಕೇಳಿದಳು. 'ಇಲ್ಲ ಕಣಮ್ಮೊ ಈ ಮಿಂಡ್ರಿಗುಟ್ಟದ ಮೇಸ್ತ್ರಿ ಇನ್ನ ಮೂರು ತಿಂಗಳದು ಸಂಬ್ಳನೇ ಕೊಟ್ಟಿಲ್ಲ, ಎಲ್ಲಿ ತರನ ದುಡ್ಡ? ನಿಮ್ಮುಡ್ಗಿಗೆ ಕೊಡಿಸ್ದೇನಮ್ಮ?' ಅಂತ ಮರು ಪ್ರಶ್ನೆ ಹಾಕಿದ. 'ಹುಕಣ್ ಗಡ್ಡಪ್ಪ, ನಮ್ಮುಡುಗಿ ಬಿಟ್ಟಾರ ಬಿಡ್ತಳ, ಜೀವಕ್ಕೆ ಜೀರ್ಗೆ ಹರ್ದು ಮೊನ್ನೆಸ ತಗಂಡು ಬಂದ್ಯೆತೆ, ಎಲ್ಡು ಡ್ಯಾನ್ಸಿಗೆ ಸೇರಿದಿನಿ ಎಲ್ಡು ಜೊತಿ ಕೊಡ್ಸವ್ವ ಅಂತವ, ನಾನು ಬೈದು ಒಂಜೊತಿ ಕೊಡ್ಸಿದಿನಿ' ಎಂದಳು. ಆ ಕಡೆ ಕಸ ಕೆರೆಯುತ್ತಿದ್ದ ಇನ್ನೊಬ್ಬು 'ನಮ್ಮುಡ್ಗಿದುವೆ ವಾರ್ದಿಂದ ಚಿತ್ರಹಿಂಸೆ ಕಣವ್ವ, ಆಗ ಹೋಗಿ ಯಾರ್ತಲೊ ಇಸ್ಕಂಡು ಬಂದು ಕೊಡ್ಸಿ ಕಳ್ಸಿದಿನಿ' ಅಂದಳು. ಅತ್ತಕಡೆಯಿಂದ ಇನ್ನೊಂದು ಹೆಂಗಸು ತನ್ನ ಮಗಳ ಮಗಳಿಗೆ ತಾನೂ ಕೂಡಿಟ್ಟಿದ್ದ ಹಣ ಹಾಕಿ ಬಟ್ಟೆ ಕೊಡ್ಸಿರದ್ನ ಹೇಳುತ್ತಿದ್ದಳು. ಇದನ್ನೆಲ್ಲ ಕೇಳಿಸಿಕೊಂಡ ಗಡ್ಡ ಒಳೊಳಗೆ ನಮ್ಮಟ್ಟಿ ಕೇರಿಯ ಎಲ್ಲರೂ ಹೆಚ್ಚುಕಮ್ಮಿ ಬಟ್ಟೆ ಕೊಡ್ಸೆ ಬಿಟ್ಟವ್ರೆ, ನಾನೆ ಅಂಗಾರೆ ಮಂಡಾಟ ಆಡ್ತಿರದು, ಅದಕೆಯ ನಮ್ಮುಡ್ಗ ಹಿಂಸೆ ತೆಗಿತಿರದು, ಇವತ್ತ ಏನಾರ ಮಾಡಿ ಆ ಕೌನ್ಸಿಲ್ರುತವ ಐನೂರ ಕಿತ್ತು ನಮ್ಮುಡ್ಗುಂಗುವೆ ಕೊಡ್ಸೇ ತೀರ್ಬೇಕು ಎಂಬ ತೀರ್ಮಾನಕ್ಕೆ ಬಂದ.

ಸರ್ಕಾರದವರು ಸುಮಾರು ಆರುನೂರು ಮನೆಯ ಅಂಬೇಡ್ಕರ್ ಕಾಲೋನಿಗೆ ಹೊಂದಿಕೊಂಡಂತೆಯೇ ಒಂದು ಶಾಲೆ ತೆರೆದು, ಅದರ ಬಾಗಿಲಿಗೆ 'ಸರ್ಕಾರಿ ಹಿರಿಯ ಮಾದರಿ ಪಾಠ ಶಾಲೆ' ಅಂಥ ಬೋರ್ಡ್ ಹಾಕಿದ್ರು. ಅಷ್ಟೊ ಇಷ್ಟೊ ಅಕ್ಷರ ಕಲಿತಿದ್ದ ಕಾಲೋನಿಯವರು ಮಾದರಿ ಎಂಬುದನ್ನು ತಮ್ಮ ತಿಳುವಳಿಕೆಗೆ ತಕ್ಕಂತೆ 'ಮಾದಿರ್' ಎಂದು ಅರ್ಥೈಸಿಕೊಂಡು ಅದರಂತೆ ಕರೆದುಕೊಳ್ಳುತ್ತಿದ್ದರು. ಕಾಗುಣಿತ ಬಾರದ ಕಲಾವಿದ ಹೀಗೆ ತಪ್ಪು ತಪ್ಪಾಗಿ ಬರೆದಿದ್ದಾನೆ ಎಂದು ಬಗೆದ ಕಾಲೋನಿಯ ಹೈಸ್ಕೂಲು ದಾಟದ ಇನ್ನೊಬ್ಬ ಕಲಾವಿದ ಕಪ್ಪು ಇಂಕನ್ನು ಹಲ್ಲುಜ್ಜುವ ಬ್ರಶ್ಶಿಗೆ ಎದ್ದಿಕೊಂಡು ಕಾಂಪೌಂಡ್ ಮೇಲಕ್ಕೆ ಹತ್ತಿ ಮಾದರಿ ಎಂಬಲ್ಲಿಯ 'ರಿ' ಯನ್ನು 'ರ್' ಎಂದು ಮಾಡಿ ಅಲ್ಲಿನ ಜನವಸತಿಗೂ, ಶಾಲೆಯ ಹೆಸರಿಗೂ ಅರ್ಥಲೋಪವಾಗದಂತೆ ತಿದ್ದಿದ್ದ.

ನಗರದ ಇನ್ನಿತರೆ ಏರಿಯಾಗಳಿಗೆ ಇಂಗ್ಲಿಷ್‌ನಲ್ಲಿ ಅಂಥ ವಾರ್ಡ್ ಇಂಥ ವಾರ್ಡ್ ಅಂಥ ಸರ್ಕಾರದ ದಾಖಲೆಯಲ್ಲಿ ಇದ್ದಂತೆಯೇ ಕರೆಯುತ್ತಿದ್ದರಾದರೂ ಈ ಅಂಬೇಡ್ಕರ್ ಕಾಲೋನಿಯ ಜನರು ಪುರಾತನದಿಂದ ಬಂದ ನಾಮವನ್ನು ಹಾಗೆ ಉಳಿಸಿಕೊಂಡು ಬಂದಿದ್ದರು. ಈ ಮಾದಿರ್ ಶಾಲೆಯ ಇನ್ನೊಂದು ವಿಶೇಷವೆಂದರೆ, ಶಾಲೆಗೆ ಅಂಟಿಕೊಂಡಂತಿರುವ ಕೊನೆ ಬೀದಿಯಲ್ಲಿ ಮಿಕ್ಸ್ ಜಾತಿಗಳ ಇನ್ನೊಂದು ಬೀದಿ ಇದ್ದು, ಅಲ್ಲಿನ ಮಿಕ್ಸ್ ಮಕ್ಕಳುಗಳಿಗೆ ಅಂಬೇಡ್ಕರ್ ಕಾಲೋನಿಯ ಮಾದಿರ್ ಸ್ಕೂಲು ಮೂರು ಉಲ್ಡು ಉರುಳಿದರೆ ಸಿಗುವಂತಿದ್ದರೂ, ಈ ಶಾಲೆಗೆ ಪುರಾತನದಿಂದ ಬಂದಿರುವ ಬ್ರಾಂಡೆಂಡ್ ಹೆಸರಿನಿಂದಾಗಿ, ಅವರ ಪೋಷಕರು ಎರಡು ಕಿಲೋಮೀಟರ್ ನಡೆದು ಹೋದರೂ ಸರಿಯೇ, ಹತ್ತಿರದ ಈ ಶಾಲೆಗೆ ಕಳುಹಿಸುತ್ತಿರಲಿಲ್ಲ. ಈ ಕಾಲೋನಿಯ ಮಕ್ಕಳು ಬೇರೆ ಬೀದಿಯ ಶಾಲೆಗೆ ಹೋಗುವುದಾಗಲಿ ಅಲ್ಲಿಯವರು ಇಲ್ಲಿಗೆ ಬರುವುದಾಗಲಿ ರೂಢಿಯಲ್ಲಿರಲಿಲ್ಲ. ಇದೊಂಥರ ಅಲಿಖಿತ ಇಂಡಿಯಾ ಪಾಕಿಸ್ತಾನ ಬಾರ್ಡರ್ ಇದ್ದಂತೆಯೇ ಇತ್ತು. ಆ ಗಡಿಯಲ್ಲಾದರೂ ಕಣ್ಣಿಗೆ ಕಾಣುವಂತೆ ಗೆರೆ ಕೊರೆಯಲಾಗಿದೆ, ಇಲ್ಲಿನ ಮಾನಸಿಕ ಗೆರೆ ಕಣ್ಣಿಗೆ ಕಾಣದಿದ್ದರೂ ಹೆಚ್ಚು ಪರಿಣಾಮಕಾರಿಯಾದುದಾಗಿತ್ತು.

ಇದೆಲ್ಲ ಶಿಕ್ಷಕರ ವರ್ಗಾವಣೆಯ ಸಮಯದಲ್ಲಿ ಗೊತ್ತಿದ್ದರೆ ಬಹುಶಃ ಈಗಿರುವ ಜ್ಯೋತಿ ಮೇಡಮ್